**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.900/2020**

**ಚಾ.ಸಾ. - 4**

**ಪ್ರಾ.ಸಾ. - 4**

**ಸಾಕ್ಷಿದಾರರ ಹೆಸರು** ಃ ರುದ್ರಪ್ಪ ಈರಪ್ಪ ಮಡ್ಲಿ

**ಸಾಕ್ಷಿದಾರರ ವಯಸ್ಸು** ಃ 31 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಕೂಲಿ

**ಸಾಕ್ಷಿದಾರರ ವಿಳಾಸ** ಃ ಸವಟಗಿ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 20-12-2022**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಚಾಸಾ-1 ಮತ್ತು 10 ಹಾಗೂ ಆರೋಪಿತರ ಪರಿಚಯ ಇರುತ್ತದೆ. ಸದರಿಯವರು ನಮ್ಮ ಗ್ರಾಮದವರು ಆಗಿರುತ್ತಾರೆ. ದಿಃ17.4.2020 ರಂದು ಸಂಜೆ 7.00 ಗಂಟೆಗೆ ಸುಮಾರಿಗೆ ನಾನು ಹೊಲದಿಂದ ಬರುವಾಗ ಬಸ ಸ್ಟ್ಯಾಂಡ ಹತ್ತಿರ ಚಾಸಾ-10 ಮತ್ತು ಆರೋಪಿತರ ನಡುವೆ ಜಗಳ ನಡೆದಿತ್ತು. ಸದರಿ ಜಗಳವನ್ನು ನಾನು ನೋಡಿ ಬಿಡಿಸಿರುತ್ತೇನೆ. 5 ನೇ ಆರೋಪಿಯು ಚಾಸಾ-1 ರವರಿಗೆ ಗಟ್ಟಿಯಾಗಿ ಹಿಡಿದುಕೊಂಡಿದ್ದರು. ಅದೇ ವೇಳೆಗೆ 1 ನೇ ಆರೋಪಿಯು ಬಡಿಗೆಯಿಂದ ಚಾಸಾ-1 ರವರಿಗೆ ತಲೆಗೆ ಹೊಡೆದಿರುತ್ತಾರೆ. ಉಳಿದ ಆರೋಪಿತರು ಚಾಸಾ-1 ಮತ್ತು 10 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯ್ದು ಹೊಡಿ ಬಡಿ ಮಾಡಿರುತ್ತಾರೆ. ನಂತರ ಆರೋಪಿತರು ಚಾಸಾ-1 ಮತ್ತು 10 ರವರಿಗೆ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಬಡಿಗೆಯನ್ನು ಅಲ್ಲಿಯೇ ಎಸೆದು ಹೋಗಿರುತ್ತಾರೆ. ಸಾಕ್ಷಿಯು ಮೂ ಮಾ 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಎಪಿಪಿ ಅವರಿಂದ**

ಘಟನೆಯು ಅದೇ ದಿನ ಬೆಳಿಗ್ಗೆ 12.00 ಜಗಂಟೆ ಸುಮಾರಿಗೆ ಚಾಸಾ-1 ರವರು ಹೊಲಕ್ಕೆ ಹೋಗುವಾಗ 1 ನೇ ಆರೋಪಿಯು ಮೋಟಾರ ಸೈಕಲನ್ನು ಮೈಮೇಲೆ ತೆಗೆದುಕೊಂಡು ಬಂದಿದ್ದ ಕಾರಣ ಬಾಯಿ ಮಾತಿನ ಜಗಳ ಆಗಿತ್ತು ಆ ಸಿಟ್ಟಿನಿಂದ ಆರೋಪಿತರು ಈಗ ಜಗಳ ತೆಗೆದಿರುತ್ತಾರೆ ಎಂದು ಚಾಸಾ-1 ರವರನ್ನು ಕೇಳಿದಾಗ ಗೊತ್ತಾಯಿತು ಎಂದರೆ ಸರಿ. 4 ಮತ್ತು 5 ನೇ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡೆ ಬಡಿ ಮಾಡಿರುತ್ತಾರೆ ಎಂದರೆ ಸರಿ. ಅದೇ ವೇಳೆಗೆ ಬಿಡಿಸಲು ಹೋದ ಚಾಸಾ-9 ರವರಿಗೆ 2 ನೇ ಆರೋಪಿಯು ಬಡಿಗೆಯಿಂದ ಎಡ ಕಿವಿಯ ಹತ್ತಿರ ಹೊಡೆದು ಗಾಯ ಪಡಿಸಿರುತ್ತಾನೆ ಎಂದರೆ ಸರಿ. ಅದೇ ವೇಳೆಗೆ ಚಾಸಾ-10 ಜಗಳ ಬಿಡಿಸಲು ಹೋದಾಗ 7 ನೇ ಆರೋಪಿಯು ಬಡಿಗೆಯಿಂದ ಎಡಗೈ ಮೊಣಕೈಗೆ, ಎಡ ಬುಜದ ಮೇಲೆ ಹೊಡೆದು ಗಾಯ ಪಡಿಸಿರುತ್ತಾನೆ ಎಂದರೆ ಸರಿ. ನಂತರ ನಾವು ಜಗಳ ಬಿಡಿಸಿರುತ್ತೇವೆ . ಚಾಸಾ-1, 9 ಮತ್ತು 10 ರವರಿಗೆ ಪೆಟ್ಟಾಗಿದ್ದರಿಂದ ಬೆಳವಡಿ ಆಸ್ಪತ್ರೆಗೆ ತೋರಿಸಿ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ದಾಖಲು ಆಗಿರುತ್ತಾರೆ ಎಂದರೆ ಸರಿ. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ದಿಃ 18.4.2020 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಮ ಎಸ ಬಿ ವಕೀಲರಿಂದ</u>

ನಾನು ವಿದ್ಯಾಬ್ಯಾಸವನ್ನು ಮಾಡಿರುವುದಿಲ್ಲ. ನಾನು ಈ ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಹೇಳಿಕೆಯನ್ನು ಪೊಲೀಸರಿಗೆ ಎಲ್ಲಿ ಕೊಟ್ಟಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿನ ಶಕ್ತಿ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಚಾಸಾ-1 ರವರು ನನಗೆ ಸಂಬಂದಿಕರು ಆಗಬೇಕು ಎಂದರೆ ಸರಿಯಲ್ಲ. ನನ್ನ ಅಜ್ಜಿಯನ್ನು ಚಾಸಾ-1 ರವರ ಮನೆತನಕ್ಕೆ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಸಂಬಂದಿಕರು ಆದರೂ ಸಂಬಂದಿಕರು ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯು ಸವಟಗಿ ಗ್ರಾಮದ ಬಡಿಗೇರ ಓಣಿಯಲ್ಲಿ ಇದೆ ಎಂದರೆ ಸರಿ. ನಮ್ಮ ಮನೆಯಿಂದ ಸವಟಗಿ ಗ್ರಾಮದ ಬಸ ನಿಲ್ದಾಣವು ಬಹಳ ದೂರ ಆಗುತ್ತದೆ ಎಂದರೆ ಸರಿ. ಬಸ ನಿಲ್ದಾಣದಿಂದ ನಮ್ಮ ಹೊಲವು ಒಂದುವರೆ ಕಿ ಮಿ ಆಗುತ್ತದೆ. ನಾನು ಹೊಲವನ್ನು ಬಿಟ್ಟಾಗ 7.00 ಗಂಟೆಯಾಗಿತ್ತು. ಘಟನಾ ಸ್ಥಳದ ಅಕ್ಕ – ಪಕ್ಕ ಮನೆಗಳು ಇವೆ ಎಂದರೆ ಸರಿ. ಘಟನಾ ಸ್ಥಳವು ಜನಸಂದಣಿ ಇರುವಂತಹ ಪ್ರದೇಶ ಎಂದರೆ ಸರಿ. ಮತ್ತು ಅಲ್ಲಿ ಸಾಕಷ್ಟು ವಾಹನಗಳು ತಿರುಗಾಡುತ್ತವೆ ಎಂದರೆ ಸರಿ. ಘಟನಾ ಸ್ಥಳದಿಂದ ಚಾಸಾ-1 ರವರ ಮನೆಯು 100 ಮೀಟರ ದುಾರದಲ್ಲಿ ಇರುತ್ತದೆ. ಚಾಸಾ-1 ರವರ ಮನೆಯು ಬಸ ಸ್ಟ್ಯಾಂಡ್ ಏರಿಯಾದಲ್ಲಿ ಬರುತ್ತದೆ. ಚಾಸಾ-1 ಹಾಗೂ ಆರೋಪಿತರ ಹೊಲಗಳು ಅಕ್ಕ-ಪಕ್ಕ ಇರುತ್ತವೆ ಎಂದರೆ ಸರಿ. ಚಾಸಾ-1 ರವರ ಸಾಗವಾನಿ ಮರಗಳು ಆರೋಪಿತರ ಹೊಲದ ದಂಡಿಗೆ ಇರುತ್ತವೆ ಎಂದರೆ ಸರಿ. ಚಾಸಾ-1 ರವರಿಗೆ ಸೇರಿದ ಮರಗಳಲ್ಲಿನ ಎಲೆಗಳು ಆರೋಪಿತರ ಹೊಲಕ್ಕೆ ಬೀಳುತ್ತವೆ ಎಂದರೆ ಸರಿ. ಚಾಸಾ-1 ರವರಿಗೆ ಸೇರಿದ ಮರಗಳ ನೇರಳಿನಿಂದ

ಆರೋಪಿತರ ಹೊಲದಲ್ಲಿ ಬೆಳೆಗಳು ಬರುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಗವಾನಿ ಮರಗಳ ಬೇರುಗಳು ಆರೋಪಿತರ ಹೊಲಕ್ಕೂ ಸಹಾ ಹೋಗಿರುತ್ತವೆ ಎಂದರೆ ಸರಿ. ಸದರಿ ಗಿಡಗಳಿಂದ ಆರೋಪಿತರ ಹೊಲಗಳಲ್ಲಿ ಬೆಳೆಗಳು ಬರುತ್ತಿರಲಿಲ್ಲ ಆದ ಕಾರಣ ಆರೋಪಿತರು ಚಾಸಾ-1 ರವರಿಗೆ ಮರಗಳನ್ನು ಕಠಾವು ಮಾಡಿ ಎಂದು ಮೇಲಿಂದ ಮೇಲೆ ಹೇಳುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಆ ದಿನ ವಿದ್ಯುತ್ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಬೀದಿ ದೀಪ ಕಂಬಗಳು ಇರಲಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿಯು ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದುಕೊಂಡಿರುತ್ತಾರೆ ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಸಾಮಾನ್ಯವಾಗಿ ಬಾಯಿ ಸ್ವಪ್ಳ ಆದರೆ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿ. ಘಟನೆಯನ್ನು ನಾನು ಸ್ವಂತಕ್ಕೆ ನೋಡಿಲ್ಲ ಎಂದರೆ ಸರಿ. 5 ನೇ ಆರೋಪಿಯು ಚಾಸಾ-1 ರವರನ್ನು ಗಟ್ಟಿಯಾಗಿ ಹಿಡಿದರು ಹಾಗೂ 1 ನೇ ಆರೋಪಿಯು ಚಾಸಾ-1 ರವನ್ನು ಮೂ ಮಾ 1 ರಿಂದ 3 ರಲ್ಲಿ ಬಡಿದಿರುವುದು ಸುಳ್ಳು ಎಂದರೆ ಸರಿಯಲ್ಲ. ಉಳಿದ ಆರೋಪಿತರು ಚಾಸಾ-1 ಮತ್ತು 10 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈಯ್ದು ಹೊಡಿ ಬಡಿ ಮಾಡಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-1 ಮತ್ತು 10 ರವರಿಗೆ ಇನ್ನೊಮ್ಮೆ ಸಿಕ್ಕರೆ ಜೀವ ಸಹಿತವಾಗಿ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಆ ದಿನ ಬೆಳಿಗ್ಗೆ 12.00 ಗಂಟೆಯಲ್ಲಿ ಚಾಸಾ-1 ರವರ ಮೇಲೆ 1 ನೇ ಆರೋಪಿಯು ಬೈಕನ್ನು ಚಲಾಯಿಸಲು ಹೋಗಿರುತ್ತಾನೆ ಎಂದು ಚಾಸಾ-1 ರವರು ನನಗೆ ಹೇಳಿರುತ್ತಾನೆ ಎಂದು ಹೇಳಿರುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡೆ ಬಡಿ ಮಾಡಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಜಗಳವನ್ನು ಬಿಡಿಸಲು ಹೋದ ಚಾಸಾ-9 ರವರಿಗೆ 2 ನೇ ಆರೋಪಿಯು ಬಡಿಗೆಯಿಂದ ಎಡಕಿವಿಗೆ ಹೊಡೆದಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಚಾಸಾ-10 ರವರಿಗೆ 7 ನೇ ಆರೋಪಿಯು ಬಡಿಗೆಯಿಂದ ಎಡಗೈ ಮೊಣಕೈ ಮತ್ತು ಎಡಗೈ ಬುಜದ ಹತ್ತಿರ ಹೊಡೆ ಬಡಿ ಮಾಡಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ನಾನು ಆ ದಿನ ಯಾವುದೇ ಜಗಳವನ್ನು ಬಿಡಿಸಿರುವುದಿಲ್ಲ ಮತ್ತು ಆದಿನ ಯಾವುದೇ ಘಟನೆ ಸಂಬವಿಸಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 10 ರವರಿಗೆ ಗಾಯವಾದ್ದರಿಂದ ಬೆಳವಡಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುತ್ತಾರೆ ಎನ್ನುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಆದಿನ ಘಟನೆ ನಡೆಯುವಾಗ 30 ರಿಂದ 40 ಜನ ಸೇರಿದ್ದರು ಆದರೆ ಅವರ ಹೆಸರನ್ನು ನನಗೆ ಹೇಳಲು ಬರುವುದಿಲ್ಲ. ಸವಟಗಿ ಗ್ರಾಮದ ಗ್ರಾಮಸ್ಥರ ಪರಿಚಯ ಇರುತ್ತದೆ ಎಂದರೆ ಸರಿ. ಚಾಸಾ-1 ರವರು ನೀಡಿದ ಖೊಟ್ಟಿ ಪಿರ್ಯಾದಿಗೆ ಅನುಸಾರವಾಗಿ ಮತ್ತು ಚಾಸಾ-1 ರವರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ಆರೋಪಿತರಿಂದ ಯಾವುದೇ ಘಟನೆ ಸಂಬಂವಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮೂ ಮಾ 1 ರಿಂದ 3 ರೈತರ ಮನೆಯಲ್ಲಿ ಸಿಗುತ್ತವೆ ಎಂದರೆ ಸರಿ. ಮೂ ಮಾ 1 ರಿಂದ 3 ನ್ನು ನಾನು ಇವತ್ತೇ ಮಾತ್ರ ಇಲ್ಲಿ

ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿವಸವೇ ಮಾತ್ರ ಮೂ ಮಾ 1 ರಿಂದ 3 ನ್ನು ನೋಡುತ್ತಿದ್ದರೂ ಮೊದಲೇ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**